## ಬುದ್ಧಿವಂತ ಮಾಲೀಕ



ಸುಮಾರು ನೂರು ಜನ ಸಿಬ್ಬಂದಿ ಇರುವ ಕಂಪನಿಯ ಗುಜರಾತಿ ಮಾಲೀಕನನ್ನು ಪತ್ರಕರ್ತನೊಬ್ಬ ಸಂದರ್ಶನ ಮಾಡಲು ಬಂದ. 'ಸರ್, ನಿಮ್ಮ ಸಿಬ್ಬಂದಿ ಕರಾರುವಾಕ್ಕಾಗಿ ಕೆಲಸದ ವೇಳೆಗೆ ಹಾಜರಾಗುತ್ತಾರೆಂದು ತಿಳಿದು ಬಂತು. ಈ ಕ್ರಮಕ್ಕೆ ಪ್ರೇರಣೆ ಏನು?' ಎಂದು ಪ್ರಶ್ನಿಸಿದ. ಮಾಲೀಕ, 'ವೆರಿ ಸಿಂಪಲ್... ನಮ್ಮ ಕಂಪನಿಯಲ್ಲಿ ನೂರು ಜನ ಕೆಲಸ ಮಾಡುತ್ತಾರೆ. ನಾನು ಕೇವಲ ಇಪ್ಪತ್ತು ಜನರಿಗೆ ಆಗುವಷ್ಟು ಫ್ರೀ ಪಾರ್ಕಿಂಗ್ ವ್ಯವಸ್ಥೆ ಮಾಡಿದ್ದೇನೆ. ಯಾರು ಮೊದಲು ಬರುತ್ತಾರೋ ಅವರಿಗೆ ಫ್ರೀ ಪಾರ್ಕಿಂಗ್. ನಂತರ ಬಂದವರು ದಿನಕ್ಕೆ ನೂರಾ ಐವತ್ತು ರೂಪಾಯಿ ಕೊಡಬೇಕೆಂದು ಸೂಚಿಸಿದ್ದೇನೆ ಎಂದು ಉತ್ತರಿಸಿದ.

**ಅರವಿಂದ ಜಿ. ಜೋಷಿ**

## ಸರ್ವರ್ ಇಲ್ಲ

ರಮೇಶ್ ಹತ್ತು ಸಾವಿರ ಹಣ ಪಡೆಯಲು ಖಾಸಗಿ ಬ್ಯಾಂಕ್ ಒಂದಕ್ಕೆ ಹೋಗಿದ್ದ. ಹಣ ಪಡೆಯುವ ಸ್ಲಿಪ್ ಅನ್ನು ಭರ್ತಿ ಮಾಡಿ ಕ್ಯಾಷ್ ಕೌಂಟರ್‌ಗೆ ಕೊಟ್ಟ. ಕ್ಯಾಶಿಯರ್, 'ಕರೀತಿನಿ ಕೂತ್ಕೊಳ್ಳಿ' ಎಂದರು. ಸುಮಾರು ಹೊತ್ತಾದರೂ ಕರೆಯಲೇ ಇಲ್ಲ. ಹತ್ತಾರು ನಿಮಿಷಗಳ ಕಾಲ ಕಾದು ಕಾದು ಸುಸ್ತಾದ ರಮೇಶ ಕೌಂಟರ್ ಬಳಿ ಹೋಗಿ 'ಸ್ಸಾರ್ ಕರೀತೀನಿ ಅಂದ್ರಿ, ಕರೀಲೆ ಇಲ್ಲ?' ಅಂತ ಕೇಳಿದ. ಕ್ಯಾಷಿಯರ್, 'ಬೆಳಿಗ್ಗೆಯಿಂದಲೂ ಸರ್ವರ್ ಇಲ್ಲ, ಸರ್ವರ್ ಬಂದ ಕೂಡಲೆ ಕರೀತೀನಿ' ಎಂದರು. ಆಗ ರಮೇಶ, 'ನಮ್ ಹೋಟೆಲ್ನಲ್ಲಿ ಆರು ಜನ ಸರ್ವರ್ ಅವ್ರೆ... ಒಬ್ಬರನ್ನ ಕರೆಸ್ಲಾ ಸಾರ್?' ಎಂದು ಕೇಳಿದ. ಮೊದಲೇ ಸರ್ವರ್ ಸಮಸ್ಯೆಯಿಂದ ತಲೆಕೆಟ್ಟ ಬ್ಯಾಂಕ್ ಕ್ಯಾಶಿಯರ್ ಸರ್ವರ್ ಬಗ್ಗೆ ಬಿಡಿಸಿ ಹೇಳುವ ಸ್ಥಿತಿಯಲ್ಲಿ ಇರಲಿಲ್ಲ.

**ಮಲ್ಲಿಕಾರ್ಜುನ ಸುರಧೇನುಪುರ**



ಕಲೆ: ಗಣೇಶ ಆಚಾರ್ಯ